ದಿಃ 20-06-2024 CC.No.11/2022 PW-1

ದಿಃ 20-06-2024 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಪಿ ವಕೀಲರಿಂದಃ

ಆರೋಪಿ ನನಗೆ ಸುಮಾರು 15 ರಿಂದ 20 ವರ್ಷಗಳಿಂದ ಪರಿಚಯ ಇರುತ್ತಾರೆ ಎಂದರೆ ಸರಿ. ನಾನು ದಿಃ 05-06-2020 ರಂದು ಚೆಕ್ಕನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿದ್ದೆ. ಅದು ಸಿಂಡಿಕೇಟ್ ಬ್ಯಾಂಕ್ ಚೆಕ್ಕು ಆಗಿತ್ತು. ಸದರಿ ಬ್ಯಾಂಕ್ ಕೆನರಾ ಬ್ಯಾಂಕ್ ಗೆ ವಿಲೀನ ಆದ ನಂತರ ಹಳೇ ಚೆಕ್ಕುಗಳನ್ನು ವಾಪಸ್ಸು ನೀಡಬೇಕೆಂದು ಆದೇಶವಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿಗೆ ವಾರ್ಷಿಕ 15 ರಿಂದ 20 ಲಕ್ಷ ಆದಾಯ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಬ್ಯಾಂಕ್ ನವರು ಹಿಂಬರಹ ನೀಡಿದ ಐದು ದಿನಗಳ ನಂತರ ನಾನು ಆರೋಪಿಗೆ ನೋಟೀಸ್ ನೀಡಿರುತ್ತೇನೆ. ಅಂದಾಜು ಅದು 10-06-2020 ಇರಬಹುದು. ಸದರಿ ನೋಟೀಸನ್ನು ಅರೋಪಿಯು ಸ್ವೀಕರಿಸಿರುತ್ತಾರೆ. ಸದರಿ ನೋಟೀಸಿಗೆ ಆರೋಪಿಯು ಪ್ರತ್ಯುತ್ತರ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸಿನ ಸಂಗತಿಗಳನ್ನು ನಾನು ತಿಳಿದುಕೊಂಡಿರುವುದಿಲ್ಲ.

ನಾನು 2011 ರಿಂದ ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದೇನೆ. ನನ್ನ ಜೊತೆ ಗೋಪಾಲಶೆಟ್ಟಿ ಎಂಬುವರು ವ್ಯವಹಾರ ಮಾಡುತ್ತಿದ್ದರು ಅವರು ಮೃತರಾಗಿರುತ್ತಾರೆ. ನಾನು ಕೃಷ್ಣೇಗೌಡ ಎಂಬುವರ ಜೊತೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ಸದರಿ ಕೃಷ್ಣೇಗೌಡರ ಪರಿಚಯ ಇರುವುದಿಲ್ಲ. ನಾನು ನನ್ನ ಮಗನ ಮೂಲಕ ಕೃಷ್ಣೇಗೌಡರ ವಿರುದ್ಧ ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕೃಷ್ಣೇಗೌಡರ ಪತ್ನಿಯ

ಮೂಲಕ ನನ್ನ ಮಗನ ಹೆಸರಿಗೆ ನ್ಯಾಯಾಲಯದ ಮೂಲಕ ಕ್ರಯಪತ್ರ ಆಗಿರುತ್ತದೆ ಎಂದರೆ ಸರಿ. ಸದರಿ ಕೃಷ್ಣೇಗೌಡರು ನನಗೆ 12 ವರ್ಷಗಳಿಂದ ಪರಿಚಯ ಇರುತ್ತಾರೆ.

ಕೃಷ್ಣೇಗೌಡರ ವಿರುದ್ಧ ನಾನು ಇದೇ ನ್ಯಾಯಾಲಯದಲ್ಲಿ ಚೆಕ್ ಅಮಾನ್ಯಗೊಂಡ ಬಗ್ಗೆ ದೂರು ದಾಖಲು ಮಾಡಿರುತ್ತೇನೆ ಎಂದರೆ ಸರಿ. ನಾನು ಹಲವು ಚೆಕ್ ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕೃಷ್ಣೇಗೌಡ ಎಂದರೆ ಆರೋಪಿಯ ಚಿಕ್ಕಪ್ಪ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮತ್ತು ಸದರಿ ಕೃಷ್ಣೇಗೌಡ 20 ವರ್ಷಗಳಿಂದ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ಸದರಿ ಕಾಲಕ್ಕೆ ಕೃಷ್ಣೇಗೌಡರು ನನ್ನಿಂದ 2 ಲಕ್ಷ ರೂ ಗಳನ್ನು ಸಾಲವಾಗಿ ಪಡೆದಿದ್ದರು ಎಂದರೆ 15 ಲಕ್ಷ ರೂ ಪಡೆದಿದ್ದರು. ಹಣದ ಭದ್ರತೆಗೋಸ್ಕರ ನಾನು ಕೃಷ್ಣೇಗೌಡ ಮತ್ತು ಆರೋಪಿಯಿಂದ ಚೆಕ್ಕುಗಳನ್ನು ಪಡೆದುಕೊಂಡಿದ್ದೆ ಎಂದರೆ 15 ಲಕ್ಷದ ವ್ಯವಹಾರಕ್ಕೆ ಕೇವಲ ಕೃಷ್ಣೇಗೌಡರಿಂದ ಮಾತ್ರ ಚೆಕ್ಕನ್ನು ಪಡೆದುಕೊಂಡಿದ್ದೆ ನಾನು ಸದರಿಯವರಿಂದ ಖಾಲಿ ಚೆಕ್ಕುಗಳನ್ನು ಕೇವಲ ಸಹಿ ಮಾಡಿಸಿಕೊಂಡು ಪಡೆದಿದ್ದೆ ಎಂದರೆ ಸರಿಯಲ್ಲ. ಕೃಷ್ಣೇಗೌಡರು ಸಾಲದ ಮೊತ್ತವನ್ನು ನನಗೆ ಮರುಪಾವತಿ ಮಾಡಿ ಚೆಕ್ಕುಗಳನ್ನು ವಾಪಸ್ಸು ನೀಡುವಂತೆ ಕೇಳಿದಾಗ ನಾನು ಮುಂದೂಡುತ್ತಾ ಬಂದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ 15 ಲಕ್ಷದ ವ್ಯವಹಾರ ಯಾವಾಗ ಆಯಿತು ಎಂದು ನೆನಪಿರುವುದಿಲ್ಲ.

ನಾನು ನಿಪಿ-1 ಚೆಕ್ಕನ್ನು ಭರ್ತಿ ಮಾಡಿ ಬ್ಯಾಂಕ್ ಗೆ ಹಾಜರುಪಡಿಸಿ ಸುಳ್ಳು ನೋಟೀಸನ್ನು ಆರೋಪಿಗೆ ನೀಡಿದ್ದೆ ಎಂದರೆ ಸರಿಯಲ್ಲ. ಆರೋಪಿಯು ಯಾವತ್ತೂ ಸಾಲ ಪಡೆಯುವ ದರದ್ದನ್ನು

ಹೊಂದಿರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ ಅದರೆ ನಾನು ಸಾಲ ಕೊಟ್ಟಿರುತ್ತೇನೆ. ಖಾಲಿ ಚೆಕ್ಕುಗಳನ್ನು ವಾಪಸ್ಸು ಕೊಡುತ್ತಾರೆ ಎಂದು ತಿಳಿದು ಆರೋಪಿಯು ನನ್ನ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ.1 ಚೆಕ್ಕನ್ನು ಮನಸ್ಸಿಗೆ ಬಂದಂತೆ ಭರ್ತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

2019-20 ರ ಸಾಲಿನ ಆದಾಯ ತೆರಿಗೆ ಪಾವತಿ ದಾಖಲೆಯನ್ನು ಹಾಜರುಪಡಿಸಲು ತಯಾರಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಸಕಲೇಶಪುರ .